ಮಧ್ಯವರ್ತಿಯಾದವರಿಗೆ ಲಾಭವಾಗಬೇಕು ಅಂದರೆ ಕಷ್ಟ ಜಾಸ್ತಿಯಾಗುತ್ತದೆ. ಪರಿಹಾರ ಕಮಿಗಾರಿಯಲ್ಲಿ ಕೊಡುವ ರೇಟ್ಸ್ ಪಿ. ಡಬ್ಲ್ಯೂ. ಡಿ. ಯವರು ಒಪ್ಪಿಕೊಂಡರೆ ಈ ಪರಿಹಾರ ಕಾಮಗಾರಿ ಹಣವನ್ನು ಆ ಇಲಾಖೆಗೆ ವರ್ಗಾಯಿಸುವುದಕ್ಕೆ ನನ್ನದೇನೂ ಅಭ್ಯಂತರವಿಲ್ಲ.

ಶ್ರೀ ಎಚ್. ಎನ್. ನಂಜೇಗೌಡ.—ತಾಲ್ಲೂಕ ಬೋರ್ಡ್ ನಿರ್ಣಯ ಮಾಡಿ ಪಿ. ಡಬ್ಲ್ಯೂ. ಡಿ. ಕೆಲಸ ಮಾಡಬೇಕು ಎಂದು ತೀರ್ಮಾನ ಮಾಡಿರುತ್ತಾರೆ. ಅದೇ ರೀತಿ ಜಲ್ಲಾ ಅಭಿವೃದ್ಧಿ ಮಂಡಲಿಯಿಂದ ತೀರ್ಮಾನವಾಗಿ ಬಂದರೆ ಅವರು ಇದನ್ನು ಮಾಡುತ್ತಾರೆಯೇ ?

ಶ್ರೀ ಬಿ. ರಾಜಯ್ಯ.—ಆಯಾಯ ತಾಲ್ಲೂಕಿನಲ್ಲಿ ಒಂದು ರಿಲೀಫ್ ಕಮಿಟಿ ಎಂದು ಮಾಡಿದ್ದೇನೆ. ಅದಕ್ಕೆ ಅಸಿಸ್ಟೆಂಟ್ ಕಮಿಷನರ್‌ರು ಚೇರಮನ್ ಆಗಿರುತ್ತಾರೆ. ಆ ಕಮಿಟಿಯಲ್ಲಿ ಶಾಸನ ಸಭಾ ಸದಸ್ಯರು ತಾಲ್ಲೂಕು ಬೋರ್ಡ್ ಅಧ್ಯಕ್ಷರು ಹಾಗು ಕೆಲವು ಅಧಿಕಾರಿಗಳು ಸೇರಿ ಕೆಲಸ ನಡೆಸಬೇಕು ಎಂದು ಮಾಡಿದ್ದೇವೆ. ಇಂಥ ಸಂದರ್ಭದಲ್ಲಿ ಪಿ. ಡಬ್ಲ್ಯೂ. ಇಲಾಖೆಯಲ್ಲಿ ನೀರಾವರಿ ಕೆಲಸ ಕಾರ್ಯಗಳನ್ನು ಅವರೇ ಮಾಡುತ್ತಾರೆ. ಈ ಪರಿಹಾರ ಕಾಮಗಾರಿ ಕೆಲಸ ತೀವ್ರವಾಗಿ ನಡೆಯಬೇಕೆಂದು ಹೀಗೆ ಹಂಚಿಕೆ ಮಾಡಿ ತಾಲ್ಲೂಕ ಮಟ್ಟದಲ್ಲಿ ನಡೆಯುತ್ತಿದೆ.

ಶ್ರೀ ಅಜೀಜ್‌ಸೇಠ್.—ಒಂದು ನಾನ್ ಆಫೀಷಿಯರ್ ಕಮಿಟಿ ಮಾಡಿ ರಿಲೀಫ್ ವರ್ಕ್ಸ್ ಸುಪರವೈಜ್ ಮಾಡುವುದಕ್ಕೆ ಯೋಚನೆ ಮಾಡುತ್ತೀರಾ ? ಕೆಳ ಮಟ್ಟದಲ್ಲಿ ಅಧಿಕಾರ ಡೀಸೆಂಟ್ರಲೈಜೇಷನ್ ಮಾಡಿ ಕಾರ್ಯಗತ ಮಾಡುವುದಕ್ಕೆ ಆಲೋಚನೆ ಮಾಡುತ್ತೀರಾ ?

ಶ್ರೀ ಬಿ. ರಾಜಯ್ಯ.—ತಾಲ್ಲೂಕ ಮಟ್ಟದಲ್ಲಿ ಜನಗಳಿಂದ ಕೂಡಿದಂಥ ಒಂದು ರಿಲೀಫ್ ಕಮಿಟಿ ಮಾಡಿದ್ದೇವೆಂದು ಹೇಳಿದ್ದೇನೆ.

Railway line from Gadag to Wadi

92. Sri RAJA PID NAIK (Shorapur).—

Will the Minister for Public Works and Electricity be pleased to state :—

(*a*) whether the Government is aware of a proposal to lay a Railway line from Wadi to Gadag ;

(*b*) if so, the steps taken by the State Government to pursue the matter with the Centre ?

A.—Sri VEERENDRA PATIL (Minister for Public Works).—

(*a*) Yes.

(*b*) The Ministry of Railways have been urged to take up the new Railway line.

Sri C. K. RAJAIAH SHETTY.—May I know when the last Communication was made to the Central Government and what are the reactions ?

† Sri VEERENDRA PATIL.—We wrote to the Government of India several times. But we have not heard anything so far.

Sri RAJA PID NAIK.—May I know whether any survey has been conducted in this behalf Sir ?

Sri VEERENDRA PATIL.—Survey has been conducted in the year 1909 and 1910 and no survey has been conducted afterwards.

ಶ್ರೀ ಎಸ್. ಎಂ. ಗುರೆಡ್ಡಿ.—ಕೇಂದ್ರ ಸರ್ಕಾರದವರು ಬೇರೆ ರಾಜ್ಯಗಳಲ್ಲಿ ಎಷ್ಟೋ ರೈಲ್ವೆ ಮಾರ್ಗಗಳನ್ನು ತೆಗೆದುಕೊಂಡಿದ್ದಾರೆ? ಅದೇ ನಮ್ಮ ರಾಜ್ಯದಲ್ಲಿ ಉಳಿದ ರಾಜ್ಯಗಳಿಗಿಂತ ಕಡಿಮೆ ಆಗಿದೆ. ವಾಡಿಯಿಂದ ಗದಗ್ ಮಾರ್ಗ ಅತಿ ಮುಖ್ಯವಾದುದು. ಇದನ್ನು ತೆಗೆದುಕೊಳ್ಳುವ ಹಾಗೆ ಮಾಡುತ್ತೀರಾ?

ಶ್ರೀ ವೀರೇಂದ್ರ ಪಾಟೀಲ್.—ಈ ಮನೆಯಲ್ಲಿ ಮತ್ತು ಮೆಲ್ಮನೆಯಲ್ಲಿ ಬಹಳಷ್ಟು ಚರ್ಚೆಯಾಗಿ, ಠರಾವು ಸಹ ಪಾಸಾಗಿದೆ. ಮೇಲಿಂದ ಮೇಲೆ ನಾವು ಕೇಂದ್ರ ಸರ್ಕಾರಕ್ಕೆ ಬರೆಯುತ್ತಿದ್ದೇವೆ. ಇನ್ನೂ ಯಾವ ಹೊಸ ಮಾರ್ಗಗಳನ್ನೂ ಸೇರಿಸಿಲ್ಲ.

Sri SHARANGOUDA INAMDAR.—In view of the discussion already taken on the floor of the this House, may I know how many times the State Government has written to the Central Government to pursue the matter and what is the date of the last letter?

Sri VEERENDRA PATIL.—I want notice.

ಶ್ರೀ ಎಂ. ನಾಗಪ್ಪ (ಬಾಗಲಕೋಟೆ).—ರಾಯಚೂರು ರೈಲ್ವೆ ಮಾರ್ಗ ಆಗಬೇಕೆಂದು ಹಿಂದಿನ ಹೈದರಾಬಾದ್ ರಾಜ್ಯವಿದ್ದಾಗ ಪರಿಶೀಲನೆ ಮಾಡುತ್ತಿದ್ದರು. ಇದು ಅದೇ ಯೋಜನೆಯೇ ಅಥವಾ ಇದು ಬೇರೆಯೆ, ಸ್ವಾಮಿ?

ಶ್ರೀ ವೀರೇಂದ್ರ ಪಾಟೀಲ್.—ಅದು ಬೇರೆ ಇರಬಹುದು. ಇದು ವಾಡಿಯಿಂದ ಗದಗವರೆಗೆ ಇರುವಂಥ ಯೋಜನೆ.

ಶ್ರೀ ಎಸ್. ಬಂಗಾರಪ್ಪ.—ಮೈಸೂರು ರಾಜ್ಯದಲ್ಲಿರುವ ಕೆಲವು ಮಾರ್ಗಗಳನ್ನು ತೆಗೆಯಬೇಕೆಂದು ರೈಲ್ವೆ ಮಿನಿಸ್ಟ್ರಿಯಲ್ಲಿ ಯೋಚನೆ ಮಾಡುತ್ತಿದ್ದಾರೆಂದು ತಿಳಿದುಬರುತ್ತೆ. ಸಾಗರ—ತಾಳಗುಪ್ಪ ಮಾರ್ಗ ಈ ತರಹ ಪರಿಶೀಲನೆಯಲ್ಲಿದ್ದರೆ ಅದನ್ನು ತೆಗೆಯಬಾರದೆಂದು ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡುತ್ತೀರಾ, ಸ್ವಾಮೀ?

ಶ್ರೀ ವೀರೇಂದ್ರ ಪಾಟೀಲ್.—ಸಾಗರ—ತಾಳಗುಪ್ಪ ರೈಲ್ವೆ ಮಾರ್ಗವನ್ನು ಡಿಸ್‌ಮ್ಯಾಂಟರ್ ಮಾಡಬೇಕೆಂಬ ವಿಷಯ ಅವರ ಪರಿಶೀಲನೆಯಲ್ಲಿತ್ತು. ಅದಕ್ಕೆ ನಾವು ಪ್ರತಿಭಟನೆ ಮಾಡಿ, ಅದು ಆಗಬಾರದೆಂದು ಹೇಳಿದ್ದೇವೆ. ಬಹುಶಃ ಈಗ ಆ ವಿಷಯ ರೈಲ್ವೆ ಮಿನಿಸ್ಟ್ರಿಯ ಮುಂದೆ ಇಲ್ಲ ಎಂದು ಕಾಣುತ್ತದೆ.

ಶ್ರೀ ಸದಾಶಿವಪ್ಪ ಪಾಟೀಲ್.—ಕೇಂದ್ರ ಸರ್ಕಾರಕ್ಕೆ ಬರೆದಿರುವುದಾಗಿ ಹೇಳಿದಿರಿ. ಅವರಿಂದ ಬಂದಿರುವ ಉತ್ತರವೇನು?

ಶ್ರೀ ವೀರೇಂದ್ರ ಪಾಟೀಲ್.—ಇದೊಂದೇ ರೈಲ್ವೆ ಲೈನ್ ವಿಚಾರವಾಗಿ ಅಲ್ಲ, ಇನ್ನೂ ಅನೇಕ ರೈಲ್ವೆ ಮಾರ್ಗಗಳ ವಿಚಾರವಾಗಿ ಬರೆದಿದ್ದೇವೆ. ನಾಲ್ಕನೆ ಯೋಜನೆ ಇನ್ನೂ ಫೈನಲೈಸ್ ಆಗಿಲ್ಲ, ಅದರಲ್ಲಿ ಎಷ್ಟು ಮಾತ್ರ ಮಾಡಿಸುವುದಕ್ಕೆ ಸಾಧ್ಯವಾಗುತ್ತದೆ ಎಂದು ವಿಚಾರ ಮಾಡುತ್ತೇವೆ ಎಂದು ಹೇಳಿದ್ದಾರೆ. ಯಾವುದೂ ಖಚಿತವಾಗಿ ಮಾಡುತ್ತೇವೆ, ಅಥವಾ ಮಾಡುವುದಕ್ಕಾಗುವುದಿಲ್ಲ ಎಂದು ಹೇಳಿಲ್ಲ.

Sri RAJA PID NAIK.—Is there any possibility of including this in the Fourth Plan?

Sri VEERENDRA PATIL.—It is very difficult to say whether this could be included in the Fourth Plan because the Fourth Plan has not yet been finalised by the Government of India.

ಶ್ರೀ ಎಂ. ಬಸವರಾಜ್.—ಮೈಸೂರು ರಾಜ್ಯದ ದಕ್ಷಿಣ ಭಾಗದ ಅಭಿವೃದ್ಧಿಯ ದೃಷ್ಟಿಯಿಂದ ಚಾಮರಾಜನಗರ—ಸತ್ಯಮಂಗಲ ರೈಲ್ವೆ ಮಾರ್ಗದ ಕೆಲಸವನ್ನು ಬೇಗ ತೆಗೆದುಕೊಳ್ಳುವಂತೆ ಮೈಸೂರು ಸರ್ಕಾರ ಪ್ರಯತ್ನ ಮಾಡುತ್ತದೆಯೇ?

ಶ್ರೀ ವೀರೇಂದ್ರ ಪಾಟೀಲ್.—ನಾವು ಕೇಂದ್ರ ಸರ್ಕಾರಕ್ಕೆ ಬರೆದಿದ್ದೇವೆ. ನಾನು ಈಗ ಹೇಳಿದಹಾಗೆ ಇದೊಂದೇ ಮಾರ್ಗವಲ್ಲ. ಈ ತರಹ ಅನೇಕ ಮಾರ್ಗಗಳನ್ನು ಹಾಕಬೇಕು, ಇದ್ದದಂಥ ಮಾರ್ಗವನ್ನು ಮೀಟರ್ ಗೇಜಿನಿಂದ ಬ್ರಾಡ್ ಗೇಜಿಗೆ ಪರಿವರ್ತನೆ ಮಾಡಬೇಕು; ಇಂಥ ಅನೇಕ ಯೋಜನೆಗಳನ್ನು ತೆಗೆದುಕೊಳ್ಳಬೇಕೆಂದು ಕೇಂದ್ರ ಸರ್ಕಾರವನ್ನು ಕೇಳಿದ್ದೇವೆ.

ಶ್ರೀ ಎಲ್. ಶ್ರೀಕಂಠಯ್ಯ.—ಇಷ್ಟು ವರ್ಷದ ಕಾಂಗ್ರೆಸ್ ಆಡಳಿತದಲ್ಲಿ ಒಂದು ರೈಲ್ವೆ ಮಾರ್ಗ ವನ್ನಾದರೂ ಸಾಧಿಸಿದ್ದಿರಾ?

ಶ್ರೀ ವೀರೇಂದ್ರ ಪಾಟೀಲ್.—ಇಲ್ಲಿಯವರೆಗೆ ರೈಲ್ವೆ ಮಿನಿಸ್ಟ್ರಿಯಿಂದ ಅನೇಕ ಮಾರ್ಗಗಳನ್ನು ಬೇಡಿದ್ದೇವೆ. ಬೇಡಿದ್ದೆಲ್ಲ ಸಿಕ್ಕಿಲ್ಲ ಎನ್ನುವುದನ್ನು ಒಪ್ಪಿಕೊಳ್ಳುತ್ತೇನೆ. ಆದರೆ ಏನು ಸಾಧಿಸಿದ್ದೇವೆ ಎನ್ನುವುದನ್ನು ಹೇಳಬೇಕಾದರೆ ಹಾಸನ-ಮಂಗಳೂರು ರೈಲ್ವೆ ಮಾರ್ಗ ಈಗ ಪ್ರಾರಂಭವಾಗಿದೆ, ಬೆಂಗಳೂರು-ಸೇಲಂ ಮಾರ್ಗ ಮುಗಿಯುತ್ತ ಬಂದಿದೆ, ಗುಂತಕಲ್‌ನಿಂದ ಹೊಸಪೇಟೆಯವರೆಗೂ ಬ್ರಾಡ್‌ಗೇಜ್ ಆಗಿದೆ. ಮುಂದೆ ಇದೇ ರೀತಿಯಾಗಿ ಗೋವಾವರೆಗೂ ಬ್ರಾಡ್‌ಗೇಜ್ ಮಾಡ ಬೇಕೆಂದು ಒತ್ತಾಯ ಮಾಡುತ್ತಿದ್ದೇವೆ.

ಶ್ರೀ ಡಿ. ಎಸ್. ನಾಡಕರ್ಣಿ.—ಹುಬ್ಬಳ್ಳಿಯಿಂದ ಕಾರವಾರಕ್ಕೆ ರೈಲ್ವೆ ಮಾರ್ಗ ಹಾಕುವ ಬಗ್ಗೆ ಸರ್ವೆ ಮಾಡಲಿಕ್ಕೆ ಕೇಂದ್ರ ಸರ್ಕಾರವನ್ನು ಒತ್ತಾಯಪಡಿಸಿದ್ದೀರಾ?

ಶ್ರೀ ವೀರೇಂದ್ರ ಪಾಟೀಲ್.—ಹುಬ್ಬಳ್ಳಿಯಿಂದ ಕಾರವಾರಕ್ಕೆ ರೈಲ್ವೆ ಮಾರ್ಗ ಹಾಕಬೇಕು ಎನ್ನುವ ವಿಚಾರದಲ್ಲಿ ಬಹಳ ದಿವಸಗಳಿಂದ ಒತ್ತಾಯ ಮಾಡುತ್ತಿದ್ದೇವೆ. ಆದರೆ ಟ್ರಾಫಿಕ್ ಸರ್ವೆ ಕೂಡ ಆಗಿದೆ. ನಾವೇ ಪ್ರತ್ಯೇಕವಾಗಿ ಒಬ್ಬ ನಿವೃತ್ತ ರೈಲ್ವೆ ಇಲಾಖೆಯ ಅಧಿಕಾರಿಯಿಂದ ಸರ್ವೆ ಮಾಡಿಸಿದ್ದೇವೆ. ಅದರ ಬಗ್ಗೆ ಒಂದು ಪುಸ್ತಕ ಕೂಡ ತಯಾರಾಗಿದೆ.

ಶ್ರೀ ಡಿ. ಎಸ್. ನಾಡಕರ್ಣಿ.—ತಾವು ಹಿಂದೂಸ್ಥಾನ ಸರ್ಕಾರಕ್ಕೆ ಸರ್ವೆ ಮಾಡಲಿಕ್ಕೆ ಒತ್ತಾಯ ಪಡಿಸಿದ್ದೀರಾ?

ಶ್ರೀ ವೀರೇಂದ್ರ ಪಾಟೀಲ್.—ಸರ್ವೆ ಮಾಡಬೇಕೆಂದು ಒತ್ತಾಯಪಡಿಸಿಲ್ಲ. ಈ ಕೆಲಸವನ್ನು ತೀವ್ರವಾಗಿ ತೆಗೆದುಕೊಳ್ಳಬೇಕೆಂದು, ಕಾರವಾರ ಒಳ್ಳೆಯ ಬಂದರು ಆಗುವುದಕ್ಕೆ ಸಾಕಷ್ಟು ಅನು ಕೂಲತೆಗಳಿರುವುದರಿಂದ ಈ ರೈಲ್ವೆ ಮಾರ್ಗ ಆಗಬೇಕೆಂದು ಕೂಡ ತಿಳಿಸಿದ್ದೇವೆ.

ಶ್ರೀ ಎಚ್. ಬಿ. ಜ್ಯಾಲನಯ್ಯ.—ಹಾಸನ ಮಂಗಳೂರು ಮಾರ್ಗದ ಸಂಬಂಧದಲ್ಲಿ ಕುದರೆ ಮುಖದ ಅದುರು ಸಮಸ್ಯೆ ಬಂದು ಈ ರೈಲ್ವೆ ಕೆಲಸ ಸ್ಥಗಿತಗೊಂಡು, ಅಲ್ಲಿದ್ದಂಥ ಮೈನೂರಿನ ಅಧಿಕಾರಿಗಳನ್ನೆಲ್ಲ ವರ್ಗ ಮಾಡಿ ಅಲ್ಲಿದ್ದ ಯಂತ್ರೋಪಕರಣಗಳನ್ನು ಬೇರೆ ಕಡೆಗೆ ಕಳಿಸಿದ್ದು ತಮ್ಮ ಗಮನಕ್ಕೆ ಬಂದಿದೆಯೇ? ಎಷ್ಟು ದಿವಸದಲ್ಲಿ ಅಥವಾ ವರ್ಷಗಳಲ್ಲಿ ಈ ಮಾರ್ಗ ಆಗುತ್ತದೆ ಎನ್ನುವುದನ್ನು ತಿಳಿಸಬಲ್ಲಿರಾ?

ಶ್ರೀ ವೀರೇಂದ್ರ ಪಾಟೀಲ್.—ಸ್ವಲ್ಪಮಟ್ಟಿಗೆ ಕೆಲಸ ನಿಧಾನವಾಗಿ ನಡೆಯುತ್ತಿದೆ ಎಂದು ವರ್ತಮಾನ ಬಂದಾಗ ನಾನು ತೀವ್ರವಾಗಿ ಕೇಂದ್ರ ಸರ್ಕಾರಕ್ಕೆ ಬರೆದೆ. ಅಷ್ಟೇ ಅಲ್ಲದೆ ಡೆಲ್ಲಿಗೆ ಹೋದಾಗ ಖುದ್ದಾಗಿ ಮತ್ತು ಕೇಂದ್ರ ಮಂತ್ರಿಗಳು ಇಲ್ಲಿಗೆ ಬಂದಾಗ ಕೂಡ ಹೇಳಿದ್ದೇನೆ. ನಮ್ಮ ಚೀಫ್ ಇಂಜಿನಿಯರನ್ನು ಅಲ್ಲಿಗೆ ಕಳಿಸಿ ರೈಲ್ವೆ ಮಾರ್ಗದ ಪ್ರಗತಿ ಯಾವ ರೀತಿಯಿಂದ ಇದೆ ಎಂದು ತಿಳಿದುಕೊಂಡು ರಿಪೋರ್ಟ್ ಮಾಡಬೇಕೆಂದು ಹೇಳಿದೆ. ಆ ಪ್ರಕಾರ ಅವರು ರಿಪೋರ್ಟ್ ಮಾಡಿದರು. ಆ ರಿಪೋರ್ಟ್‌ನ್ನು ಕೇಂದ್ರ ಸರ್ಕಾರಕ್ಕೆ ಕಳಿಸಿದ್ದೇವೆ. ಕೆಲಸವನ್ನು ನಿಲ್ಲಿಸುವುದಿಲ್ಲ, ಅದಷ್ಟು ಜಾಗ್ರತೆ ಮುಗಿಸುತ್ತೇವೆ ಎನ್ನುವ ಭರವಸೆಯನ್ನು ಕೊಟ್ಟಿದ್ದಾರೆ.

ಶ್ರೀ ಎಚ್. ಸಿದ್ದವೀರಪ್ಪ.—ಗುಂತಕಲ್—ಹೊಸಪೇಟೆ ರೈಲ್ವೆ ಮಾರ್ಗ ಬ್ರಾಡ್‌ಗೇಜ್ ಮಾಡ ರಾಗಿದೆ ಎಂದು ಮಂತ್ರಿಗಳು ಹೇಳಿದರು. ಅದನ್ನು ಮಾಡಿದ್ದರಿಂದ ನಮ್ಮ ದೇಶದ ಪ್ರಗತಿ ಕುಂಠಿ ತವಾಗಿದೆ, ಅದರಿಂದ ಸುಖವಾಗಿಲ್ಲ, ಆ ರೈಲ್ವೆ ಮಾರ್ಗವನ್ನು ಹಾಕಿದಮೇಲೆ ಅದುರು ಮದ್ರಾಸ್ ಬಂದರಿಗೆ ಹೋಗುತ್ತಿದೆ. ನಮಗೆ ಏನೂ ಉಪಕಾರವಾಗಿಲ್ಲ ಎನ್ನುವುದು ತಮ್ಮ ಗಮನಕ್ಕೆ ಬಂದಿದೆಯೇ ಸ್ವಾಮಿ?

ಶ್ರೀ ವೀರೇಂದ್ರ ಪಾಟೀಲ್.—ಅದರಿಂದ ಅನುಕೂಲವಾಯಿತೋ ಇಲ್ಲವೋ ಎನ್ನುವುದು ಬೇರೆ ಪ್ರಶ್ನೆ. ರೈಲ್ವೆ ಮಿನಿಸ್ಟ್ರಿಯಿಂದ ಏನು ಸಾಧಿಸಿದ್ದೀರಿ ಎಂದು ಮಾನ್ಯ ಸದಸ್ಯರು ಕೇಳಿದ್ದಕ್ಕೆ ಅದನ್ನು ಹೇಳಿದೆ. ಮಾನ್ಯ ಸಿದ್ದವೀರಪ್ಪನವರು ಹೇಳಿದಂತೆ ಆ ಮಾರ್ಗವನ್ನು ಹೊಸಪೇಟೆಗೆ ನಿಲ್ಲಿಸಿದರೆ ಅದ ರಿಂದ ನಮಗೆ ಪ್ರತಿಕೂಲವಾಗುತ್ತದೆಯೇ ಹೊರತು ಅನುಕೂಲವಾಗುವುದಿಲ್ಲ. ಹೊಸಪೇಟೆ ಬಳ್ಳಾರಿ ಅದುರು ಮದ್ರಾಸ್ ಕಡೆ ಹೋಗುವುದಕ್ಕೆ ಏರ್ಪಾಡಾಗಿದೆ ಏನ್ನುವ ಸಂಶಯ ಇದರಿಂದ ಬರು ವಂತಾಗಿದೆ. ಅದನ್ನು ಹೊಸಪೇಟೆಗೆ ನಿಲ್ಲಿಸದೆ ಹುಬ್ಬಳ್ಳಿಯವರೆಗೂ ಮತ್ತು ಅಲ್ಲಿಂದ ಗೋವಾವರೆಗೂ ವಿಸ್ತರಿಸಬೇಕೆಂದು ಕೇಳಿಕೊಂಡಿದ್ದೇವೆ. ಬಹುಶಃ ಕೇಂದ್ರ ಸರ್ಕಾರದವರು ಒಪ್ಪಬಹುದು ಎಂದು ನಾನು ನಂಬುತ್ತೇನೆ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಹಕ್ಕಾನನೆ—ಮಂಗಳೂರು ರೈಲ್ವೆ ಆಗಿ ಕಡೂರು—ಚಿಕ್ಕಮಗಳೂರು—ಮೂಡಿಗೆರೆ—ನಕಲೇಶಪುರ ಮಾರ್ಗವನ್ನು ರಚಿಸುವ ಬಗ್ಗೆ ತಮ್ಮ ಅಭಿಪ್ರಾಯವೇನು ಸ್ವಾಮಿ ?

ಶ್ರೀ ವೀರೇಂದ್ರ ಪಾಟೀಲ್.—ನನ್ನ ಅಭಿಪ್ರಾಯದಿಂದ ಏನಾಗುತ್ತದೆ ರೈಲ್ವೆ ಮಿನಿಸ್ಟ್ರಿಯವರು ಆದನ್ನು ವಿಚಾರ ಮಾಡಬೇಕು. ನಾನು ಅಭಿಪ್ರಾಯಪಟ್ಟರೂ ಏನೂ ಸಾಧ್ಯವಿಲ್ಲ.

ಶ್ರೀ ಎಚ್. ಸಿದ್ದವೀರಪ್ಪ.—ಈಗ ಹೊಸ ಮಾರ್ಗಗಳನ್ನು ಹಾಕುವುದಕ್ಕೆ ಪ್ರಯತ್ನ ಮಾಡುತ್ತಿರುವುದರ ಜೊತೆಗೆ ಇರತಕ್ಕ ರೈಲ್ವೆ ಮಾರ್ಗಗಳನ್ನು ಕೀಳದ ಹಾಗೆ ಮಾಡುತ್ತೀರಾ ? ಚಿಕ್ಕಜಾಜೂರು ಚಿತ್ರದುರ್ಗ ಮಾರ್ಗವನ್ನು ಕೀಳಬೇಕೆಂದು ಕೇಂದ್ರ ಸರ್ಕಾದವರು ವಿಚಾರ ಮಾಡುತ್ತಿರುವುದಾಗಿ ಗೊತ್ತಾಗಿದೆ. ಅದನ್ನು ಕೀಳದಂತೆ ತಡೆಗಟ್ಟುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಈ ರೀತಿಯಾಗಿ ಕೆಲವು ಮಾರ್ಗಗಳನ್ನು ಕೀಳಬೇಕು ಎನ್ನುವಂಥಾದ್ದರ ವಿಚಾರವಾಗಿ ಆಗಾಗ್ಗೆ ವರದಿಗಳು ಬರುತ್ತಿರುತ್ತವೆ ಮತ್ತು ಕೇಳುತ್ತಿರುತ್ತಾರೆ. ಈಗ ಹೇಳಿದ ಹಾಗೆ ಸಾಗರ—ತಾಳಗುಪ್ಪ, ಮೈಸೂರು—ಚಾಮರಾಜನಗರ, ಬಂಗಾರಪೇಟೆ—ಕೋಲಾರ—ಬೆಂಗಳೂರು, ಈ ಮಾರ್ಗಗಳೆಲ್ಲ ಅನ್ ರೆಮ್ಯುನರೇಟಿವ್ ಆಗಿವೆ, ರೈಲ್ವೆ ಇಲಾಖೆಗೆ ಅದರಿಂದ ಎಷ್ಟೋ ಹಾನಿಯಾಗುತ್ತದೆ, ಪ್ರತಿ ವರ್ಷವೂ ಲುಕ್ಸಾನಾಗುತ್ತದೆ ಎಂದು ಹೇಳುತ್ತಿದ್ದಾರೆ. ತಾವು ಇಲ್ಲಿಯವರೆಗೂ ಅವರು ಕೀಳದಂತೆ ನೋಡಿಕೊಂಡಿದ್ದೇವೆ, ಆ ಕೆಲಸ ಆಗದಂತೆ ತಡೆಹಿಡಿದಿದ್ದೇವೆ. ಆ ರೀತಿ ಆಗದಂತೆ ಸಾಧ್ಯವಾದಮಟ್ಟಿಗೂ ನೋಡಿಕೊಳ್ಳುತ್ತೇವೆ.

Vajjanakurke Tank in Koratagere Taluk

93. Sri GANGABOVI (Gulur).—

Will the Minister for Public Works be pleased to state :—

(*a*) whether it is a fact that the water was impounded in 1960 and lands under submersion to date under Vajjanakurke Tank in Koratagere Taluk, Tumkur District ;

(*b*) whether it is a fact that acquisition of land was not at all finalised even after impounding water since 1960 ;

(*c*) whether it is a fact that the land owners are still paying Kandayam for these lands under submersion since 1960 ;

(*d*) whether the Government would pay interest since 1960 on the amount of award ?

(*e*) if not whether Government would fix the responsibility on the defaulting officers for having delayed the matter ;

(*f*) whether Government would expedite the acquisition proceedings without further delay ?

A.—Sri ALUR HANUMANTHAPPA (Deputy Minister for Minor Irrigation).—

(*a*) No impounding was done in 1960. But the water was impounded during 1963.

(*b*) Does not arise in view of reply to clause (*a*).

(*c*) Yes.